ಕಬ್ಬನ್ ಪಾರ್ಕ್‌ನಲ್ಲಿ ವಾಹನ ಸಂಚಾರ ನಿಷೇಧ

3501 - ಶ್ರೀ ಎಲ್.ಆರ್. ಶಿವರಾಮೇಗೌಡರು (ನಾಗಮಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಕಬ್ಬನ್ ಪಾರ್ಕಿನಲ್ಲಿ ಖಾಸಗಿ ಕಟ್ಟಡ ನಿರ್ಮಾಣ, ಸರ್ಕಾರಿ ಕಟ್ಟಡ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆಯೇ?

ಆ) "ಕಬ್ಬನ್ ಪಾರ್ಕ್ " ಪ್ರದೇಶವನ್ನು ಸುಸಜ್ಜಿತವಾಗಿಡಲು ಖಾಸಗಿ ಕಂಪೆನಿಯವರ ಸಹಯೋಗ ಪಡೆಯಲು ಇಲಾಖೆ ಯೋಜಿಸಿದೆಯೇ?

ಇ) ಕಬ್ಬನ್ ಪಾರ್ಕ್‌ನಲ್ಲಿ "ವಾಹನ ಸಂಚಾರ " ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಕಬ್ಬನ್ ಪಾರ್ಕಿನ ಬಹುತೇಕ ಪ್ರದೇಶದಲ್ಲಿ ವಾಹನ ಸಂಚಾರ ನಿಷೇಧಿಸಿದೆ. ಗೋಪಾಲ ಗೌಡ ವೃತ್ತದಿಂದ ಸಿದ್ಧಯ್ಯ ವೃತ್ತಕ್ಕೆ, ಕೆ.ಆರ್. ವೃತ್ತದಿಂದ ಸಿದ್ಧಯ್ಯ ವೃತ್ತಕ್ಕೆ ಮತ್ತು ಶೇಷಾದ್ರಿ ಸ್ಮಾರಕ ಸಾರ್ವಜನಿಕ ಗ್ರಂಥಾಲಯ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ವಿಕ ಮುಖಿ ಸಂಚಾರ ಹಾಗೂ ವಿಕ್ಟೋರಿಯ ರಾಣಿ ವೃತ್ತದಿಂದ ಪಾರ್ಕಿನ ಮೇಲ್ಭಾಗಕ್ಕೆ ಮಾತ್ರ ವಾಹನ ಸಂಚಾರಕ್ಕೆ ಅವಕಾಶವಿದೆ.

ಮಂಡ್ಯ ಹಾಗೂ ಬಿಜಾಪುರಗಳಲ್ಲಿ ಕೃಷಿ ಕಾಲೇಜು ಸ್ಥಾಪನೆ

3599 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ _ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮಂಡ್ಯ ಹಾಗೂ ಬಿಜಾಪುರಗಳಲ್ಲಿ ಕೃಷಿ ಕಾಲೇಜು ಸ್ಥಾಪಿಸುವ ಸರ್ಕಾರದ ತೀರ್ಮಾನವನ್ನು ಎಂದು ಕಾರ್ಯರೂಪಕ್ಕೆ ತರಲಾಗುವುದು?

ಆ) ಮೇಲ್ಕಂಡ ಕಾಲೇಜುಗಳಲ್ಲಿ ಒಂದನ್ನು ನಾಗಮಂಗಲ ತಾಲ್ಲೂಕಿನಲ್ಲಿ ಸ್ಥಾಪಿಸಲಾಗುವುದೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಬಿಜಾಪುರ ಕೃಷಿ ಕಾಲೇಜು 1990-91ನೇ ಸಾಲಿನಿಂದ ಪ್ರಾರಂಭಗೊಂಡಿದೆ. 1991-92ನೇ ಸಾಲಿಗೆ ಮಂಡ್ಯ ಕಾಲೇಜಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

ಆ) ಉದ್ಭವಿಸುವುದಿಲ್ಲ.

ಕೊಲ್ಲೂರು ಮುಕಾಂಬಿಕಾ ದೇವಸ್ಥಾನದ ಆಡಳಿತ ಮಂಡಳಿಯ ರದ್ದಿ.

3601 - ಶ್ರೀ ಎಲ್.ಆರ್.ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

1) ರಾಜ್ಯದ ಪ್ರತಿಷ್ಠಿತ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಆಡಳಿತ ಮಂಡಳಿಯನ್ನು ಸರ್ಕಾರ ರದ್ದುಪಡಿಸಲು ಕಾರಣಗಳೇನು?

2) ಈ ದೇವಸ್ಥಾನದ ವ್ಯವಹಾರಗಳನ್ನು ನಿರ್ವಹಿಸಲು ಧರ್ಮದರ್ಶಿ ಮಂಡಳಿಯ